O.S. NO. 25/2014
PW - 1.
Dated 10-03-2026.

ಸಾಕ್ಷಿಯನ್ನು ಈ ದಿನ ದಿನಾಂಕ 10-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎ ಬಿ ವಕೀಲರಿಂದಃ

ಈಗ ತೋರಿಸಿದ ದಾಖಲೆ ನೊಂದಾಯಿತ ಅಲ್ಲದ ಹಕ್ಕು ಬಿಟ್ಟ ಪತ್ರ ನನ್ನ ತಂದೆಯವರು ನನ್ನ ದೊಡ್ಡಪ್ಪ ಅಬ್ದುಲ ರಜಾಕ ರವರಿಗೆ ಬರೆದು ಕೊಟ್ಟಿರುವ ಪತ್ರ ಇರುತ್ತದೆ ಎಂದರ ಸಾಕ್ಷಿ ನನ್ನ ತಂದೆ ಯಾವುದು ಹಕ್ಕು ಬಿಟ್ಟು ಪತ್ರ ಬರೆದು ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ಪಹಣಿ ಪತ್ರಿಕೆ ನನ್ನ ತಂದೆ ಈಗಾಗಲೇ ಮಾರಾಟ ಮಾಡಿದ ಸರ್ವೆ ನಂ. 208 ನೇದ್ದರ ಪಹಣಿ ಪತ್ರಿಕೆಯ ಪ್ರತಿ ಎಂದರೆ ಸಾಕ್ಷಿ ನನ್ನ ತಂದೆ ಮಾರಾಟ ಮಾಡಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ತಂದೆಯವರ ಹೆಸರು ಇದೆ ಎಂದರೆ ಸರಿ. ಸಾಕ್ಷಿ ಸದರಿ ಪಹಣಿ ಪತ್ರಿಕೆಯಲ್ಲಿ ತನ್ನ ತಂದೆ ಹೆಸರು ಇರುವುದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ - 27 ಎಂದು ಗುರುತಿಸಲಾಯಿತು. ನಿಡಿ - 27 ರಲ್ಲಿ ನನ್ನ ತಂದೆಯವರ ಹೆಸರು ಡೈರಿ ನಂ. 676 ನೇದ್ದರ ಆಧಾರದ ಮೇಲೆ ದಾಖಲಾಗಿರುತ್ತದೆ ಎಂದರೆ ಸರಿ. ಈಗ ತೋರಿಸಿದ ಡೈರಿ ನಂ. 676 ನೇದ್ದರ ಪ್ರತಿ ಎಂದರೆ ಸಾಕ್ಷಿ ಸದರಿ ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈಗ ತೋರಿಸಿದ 5 ಪ್ರಾಪರ್ಟಿ ರಜಿಸ್ಟರ ಕಾರ್ಡನ ನಕಲುಗಳು ನಮ್ಮ ಧಾರವಾಡದಲ್ಲಿ ಇರುವ ಆಸ್ತಿ ನಂ.

O.S. NO. 25/2014
PW – 1.
Dated 10–03–2026.

104/1ಎ/1ಎ/1ಬಿ, 104/14, 104/15, 104/16, 104/17, 104/18, 104/19, 104/1ಎ1/ಎ1ಎ ನೇದ್ದರಗಳು ನನ್ನ ಅಜ್ಜನ ಹೆಸರಿನಲ್ಲಿ ಇರುವ ಹಳೆಯ ಉತಾರಗಳು ಎಂದರೆ ಸರಿ. ಅವುಗಳನ್ನು ಸಾಕ್ಷಿ ನೊಡಿ ಗುರುತಿಸಿರುವುದರಿಂದ ಕ್ರಮವಾಗಿ ನಿಡಿ – 28 ರಿಂದ 35 ಎಂದು ಗುರುತಿಸಲಾಯಿತು. ಸದರಿ ಧಾರವಾಡದಲ್ಲಿ ನಿಡಿ – 27 ರಿಂದ 35 ರ ಆಸ್ತಿಗಳು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಮಧ್ಯೆ ಆದ ಪಾಲು ವಿಭಾಗದಲ್ಲಿ ನನ್ನ ತಂದೆಯ ಹಿಸ್ಸೆಗೆ ಬಂದಿರುವ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಪಾಟ್ನರಶಿಪನಲ್ಲಿ ಜನತಾ ಎಕ್ಸಪ್ರೇಸ ಎಂಬ ಹೆಸರಿನ ಟ್ರಾನ್ಸಪೊರ್ಟ ಬುಸಿನೆಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಸ್ವಂತತ್ರವಾಗಿ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಸದರಿ ಟ್ರಾನ್ಸಪೊರ್ಟನಲ್ಲಿ ಎಷ್ಟು ಟ್ರಕಗಳು ಇದ್ದವು ಎಂದರೆ 2 ಟ್ರಕಗಳು ಮಾತ್ರ ಇದ್ದವು ಎಂದು ನುಡಿದಿರುತ್ತಾರೆ. ಸದರಿ ಟ್ರಾನ್ಸಪೊರ್ಟ ಬುಸಿನೆಸ ನನ್ನ ತಂದೆ ತನ್ನ 17–18 ನೇ ವಯಸ್ಸಿನಲ್ಲಿ ಪ್ರಾರಂಬಿಸಿದ್ದರು. ಸದರಿ ಟ್ರಾನ್ಸಪೊರ್ಟ ಬುಸಿನೆಸನ್ನು 2019 ರಲ್ಲಿ ಬಂದ ಮಾಡಿರುತ್ತೇವೆ. ನನ್ನ ತಂದೆ ಮೃತಪಟ್ಟ ನಂತರ ನಮ್ಮ ಧಾರವಾಡದಲ್ಲಿ ಇರುವ ನನ್ನ ತಂದೆಯ ಸ್ವಂತತ್ರ ಆಸ್ತಿಯಲ್ಲಿ ನಾನು ಮತ್ತು ನನ್ನ ಸಹೊದರರು ಪಾಲು ವಿಬಾಗ ಮಾಡಿಕೊಂಡಿರುತ್ತೇವೆ. ನನ್ನ ತಂದೆ ಮೃತ ಪಟ್ಟ 4–5 ವರ್ಷಗಳ ನಂತರ ಪಾಲು ವಿಬಾಗ ಮಾಡಿಕೊಂಡಿರುತ್ತೇವೆ. ಧಾರವಾಡದ ಆಸ್ತಿಗಳು ಎಂದರೆ ನಿಡಿ – 28 ರಿಂದ 35 ರಲ್ಲಿಯ ಆಸ್ತಿಗಳು. ಸದರಿ ಧಾರವಾಡದ ನಿಡಿ –28 ರಿಂದ 35 ರಲ್ಲಿಯ ಆಸ್ತಿಗಳನ್ನು ಹೊರತು ಪಡಿಸಿ ನಾನು ಮತ್ತು ನನ್ನ ಸಹೊದರರು ಬೇರೆ ಆಸ್ತಿಗಳ

O.S. NO. 25/2014
PW – 1.
Dated 10–03–2026.

ಕುರಿತು ಪಾಲು ವಿಬಾಗ ಮಾಡಿಕೊಂಡಿರುವುದಿಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಮಧ್ಯೆ ಈಗಾಗಲೇ ಪಾಲು ವಿಬಾಗ ಆಗಿದ್ದರೂ ಸಹ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲು ವಿಬಾಗದಲ್ಲಿ ನನ್ನ ತಂದೆ ಹಿಸ್ಸೆಗೆ ಬಂದಿರುವ ಆಸ್ತಿಗಳಲ್ಲಿ ಸ್ವಲ್ಪ ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ – 27 ರಲ್ಲಿಯ ಸರ್ವೆ ನಂ. 208 ನೇದ್ದರ ಆಸ್ತಿಯನ್ನು ಮಾಡಿದ್ದಾರಾ ಇಲ್ಲವೊ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ನನ್ನ ತಂದೆ ಹೆಸರಿನಲ್ಲಿ ಸರ್ವೆ ನಂ. 206 ಆಸ್ತಿ ಇದೆಯಾ ಇಲ್ಲವೊ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.